# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ರಾಜ್ಯದ ಸರ್ಕಾರಿ ಮತ್ತು ಅನುದಾನಿತ ಪ್ರೌಢಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮುಖ್ಯ ಶಿಕ್ಷಕರು/ಸಹ ಶಿಕ್ಷಕರ ಸಮಾನಾಂತರ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರಿಗೆ ಹೆಚ್ಚುವರಿ ವೇತನ ಬಡ್ತಿ ಮಂಜೂರಾತಿ ಬಗ್ಗೆ.

*** ***

**ಓದಲಾಗಿದೆ :-**

1) ಸರ್ಕಾರದ ಆದೇಶ ಸಂಖ್ಯೆ : ಇಡಿ 78 ಎಸ್‌ಎಲ್‌ಬಿ 2016, ದಿನಾಂಕ : 15.04.2016
2) ಸರ್ಕಾರದ ಆದೇಶ ಸಂಖ್ಯೆ : ಇಡಿ 78 ಎಸ್‌ಎಲ್‌ಬಿ 2016, ದಿನಾಂಕ : 02.05.2017
3) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ : ಹೆಚ್.ಆರ್.ಎಂ.ಎಸ್/ಹೆ.ವೇ.ಬ:01/2016-17, ದಿನಾಂಕ : 14/09/2017 ರಲ್ಲಿ ಏಕಕಡತದಲ್ಲಿನ ಪ್ರಸ್ತಾವನೆ.

**ಪ್ರಸ್ತಾವನೆ :-**

ಮೇಲೆ ಕ್ರಮಾಂಕ [1]ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಸರ್ಕಾರಿ/ಅನುದಾನಿತ ಪ್ರೌಢಶಾಲಾ ಶಿಕ್ಷಕರು ಮತ್ತು ಮುಖ್ಯ ಶಿಕ್ಷಕರುಗಳಿಗೆ ದಿನಾಂಕ : 01.06.2016ಕ್ಕೆ ಅನ್ವಯವಾಗುವಂತೆ ಒಂದು ಹೆಚ್ಚುವರಿ ವೇತನ ಬಡ್ತಿಯನ್ನು ಮಂಜೂರು ಮಾಡಲಾಗಿದೆ.

ಕ್ರಮಾಂಕ [2]ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ರಾಜ್ಯದ ಸರ್ಕಾರಿ ಮತ್ತು ಅನುದಾನಿತ ಪ್ರೌಢಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಚಿತ್ರಕಲಾ ಶಿಕ್ಷಕರು ಮತ್ತು ಸಂಗೀತ, ನೃತ್ಯ ಮತ್ತು ನಾಟಕ ಶಿಕ್ಷಕರುಗಳಿಗೂ ಕೂಡ ಒಂದು ಹೆಚ್ಚುವರಿ ವೇತನ ಬಡ್ತಿ ಸೌಲಭ್ಯವನ್ನು ದಿನಾಂಕ:01.06.2016 ರಿಂದ ಜಾರಿಗೆ ಬರುವಂತೆ ಮಂಜೂರು ಮಾಡಿ ಆದೇಶಿಸಲಾಗಿದೆ.

ಕ್ರಮಾಂಕ [3]ರಲ್ಲಿ ಓದಲಾದ ಪ್ರಸ್ತಾವನೆಯಲ್ಲಿ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ/ಸಹ ಶಿಕ್ಷಕರ/ವೃತ್ತಿ ಶಿಕ್ಷಕರ ಸಮಾನಾಂತರದ ಕೆಲವು ಹುದ್ದೆಗಳಿಗೆ ಒಂದು ಹೆಚ್ಚುವರಿ ವೇತನ ಬಡ್ತಿಯನ್ನು ವಿಸ್ತರಿಸುವ ಕುರಿತು ಪ್ರಸ್ತಾಪಿಸಲಾಗಿರುವುದನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ : ಇಡಿ 145 ಎಸ್.ಎಲ್.ಬಿ 2017 (ಭಾಗ-1), ಬೆಂಗಳೂರು, ದಿನಾಂಕ : 20ನೇ ಸೆಪ್ಟೆಂಬರ್ 2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 1ನೇ ಜೂನ್ 2016ರಂದು ಕಾರ್ಯನಿರ್ವಹಿಸುತ್ತಿರುವ ಈ ಕೆಳಕಂಡ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕ ವೃಂದದ ಸಮಾನಾಂತರ, ಪ್ರೌಢಶಾಲಾ ಸಹ ಶಿಕ್ಷಕರ ಸಮಾನಾಂತರ ಹುದ್ದೆಗಳಲ್ಲಿ ಮತ್ತು ವೃತ್ತಿ ಶಿಕ್ಷಕರ ಸಮಾನಾಂತರ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರೌಢಶಾಲಾ ಮುಖ್ಯ ಶಿಕ್ಷಕರು, ಪ್ರೌಢಶಾಲಾ ಸಹ ಶಿಕ್ಷಕರು ಮತ್ತು ಪ್ರೌಢಶಾಲಾ ವೃತ್ತಿ ಶಿಕ್ಷಕರುಗಳಿಗೆ ದಿನಾಂಕ : 01-06-2016ರಿಂದ ಜಾರಿಗೆ ಬರುವಂತೆ ಒಂದು ಹೆಚ್ಚುವರಿ ವೇತನ ಬಡ್ತಿ ಸೌಲಭ್ಯವನ್ನು ಮಂಜೂರು ಮಾಡಿ ಆದೇಶಿಸಲಾಗಿದೆ.

| ಕ್ರ ಸಂ. | ಹುದ್ದೆಯ ಪದನಾಮ |
|---|---|
| ಅ) ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು ಹಾಗೂ ಸಮಾನಾಂತರ ಹುದ್ದೆಗಳು | |
| 1 | ಉಪಪ್ರಾಂಶುಪಾಲರು (ಪ್ರೌಢ ಶಾಲಾ ವಿಭಾಗ) |
| 2 | ವಿಷಯ ಪರಿವೀಕ್ಷಕರು [ಸಹನಿರ್ದೇಶಕರ ಕಛೇರಿ/ಉಪನಿರ್ದೇಶಕರ ಕಛೇರಿ] |
| 3 | ಉಪನ್ಯಾಸಕರು [ಡಯಟ್] |
| 4 | ಉಪನ್ಯಾಸಕರು [ಸಿ.ಟಿ.ಇ] |
| 5 | ಉಪನ್ಯಾಸಕರು [ಸರ್ಕಾರಿ ಹಿಂದಿ ಶಿಕ್ಷಕರ ಪ್ರಶಿಕ್ಷಣ ಸಂಸ್ಥೆ, ಮೈಸೂರು] |
| 6 | ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ [ಬಿ.ಆರ್.ಸಿ] |
| 7 | ಸಹಾಯಕ ಯೋಜನಾ ಸಮನ್ವಯಾಧಿಕಾರಿಗಳು[ಎ.ಪಿ.ಸಿ.ಒ, ಎಸ್.ಎಸ್.ಎ] |
| 8 | ಸಹಾಯಕ ಯೋಜನಾ ಸಮನ್ವಯಾಧಿಕಾರಿಗಳು[ಎ.ಪಿ.ಸಿ.ಒ] [ಆರ್.ಎಂ.ಎಸ್.ಎ] |
| 9 | ಸಹಾಯಕ ಕಾರ್ಯಕ್ರಮಾಧಿಕಾರಿಗಳು [ಎಸ್.ಎಸ್.ಎ] |
| 10 | ಸಹಾಯಕ ನಿರ್ದೇಶಕರು [ಇ-ಆಡಳಿತ ಘಟಕ, ಎಸ್.ಎಸ್.ಎ] |



Scanned by CamScanner

| | |
|---|---|
| 11 | ಸಹಾಯಕ ನಿರ್ದೇಶಕರು [ಕೆ.ಎಸ್.ಇ.ಇ.ಬಿ] |
| 12 | ಸಹಾಯಕ ನಿರ್ದೇಶಕರು [ಅಕ್ಷರ ದಾಸೋಹ] |
| 13 | ಸಹಾಯಕ ನಿರ್ದೇಶಕರು [ಉಪನಿರ್ದೇಶಕರ ಕಛೇರಿ, ಮ.ಊ.ಯೋ] |
| 14 | ಸಹಾಯಕ ನಿರ್ದೇಶಕರು [ಪಠ್ಯಪುಸ್ತಕ ಸಂಘ] |
| 15 | ಸಹಾಯಕ ನಿರ್ದೇಶಕರು [ಆರ್.ಎಂ.ಎಸ್.ಎ] |
| 16 | ಸಹಾಯಕ ನಿರ್ದೇಶಕರು [ಕೆ.ಎಸ್.ಕ್ಯು.ಎ.ಸಿ] |
| 17 | ಸಹಾಯಕ ಕಾರ್ಯಕ್ರಮಾಧಿಕಾರಿಗಳು [ಕೆ.ಎಸ್.ಕ್ಯು.ಎ.ಸಿ] |
| ಆ) ಪ್ರೌಢಶಾಲಾ ಸಹ ಶಿಕ್ಷಕರ ಸಮಾನಾಂತರ ಹುದ್ದೆಗಳು: | |
| 1 | ಪದವೀಧರ ಮುಖ್ಯೋಪಾಧ್ಯಾಯರು [ಸ.ಮಾ.ಹಿ.ಪ್ರಾ.ಶಾಲೆ] |
| 2 | ಶಿಕ್ಷಣ ಸಂಯೋಜಕರು [ಇ.ಸಿ.ಓ ಪ್ರೌಢ] |
| 3 | ತಾಂತ್ರಿಕ ಸಹಾಯಕರು [ಆಯುಕ್ತರ ಕಛೇರಿ] |
| 4 | ತಾಂತ್ರಿಕ ಸಹಾಯಕರು [ಮ್ಯಾನಾಂಟ್/ಪಠ್ಯಪುಸ್ತಕ ಸಂಘ] |
| 5 | ತಾಂತ್ರಿಕ ಸಹಾಯಕರು [ಎಸ್.ಎಸ್.ಎ/ಆರ್.ಎಂ.ಎಸ್.ಎ] |
| 6 | ತಾಂತ್ರಿಕ ಸಹಾಯಕರು [ಡಿ.ಎಸ್.ಇ.ಆರ್.ಟಿ] |
| 7 | ಕ್ಷೇತ್ರ ಸಂಪನ್ಮೂಲ ವ್ಯಕ್ತಿ [ಪ್ರೌಢ ಶಿಕ್ಷಣ] [ಬಿ.ಆರ್.ಪಿ] |
| 8 | ಯೋಜನಾ ಸಹಾಯಕರು [ಆಯುಕ್ತರ ಕಛೇರಿ] |
| 9 | ವಯಸ್ಕರ ಶಿಕ್ಷಣ ಸಹಾಯಕರು |
| 10 | ಚಿತ್ರಕಲಾ ಶಿಕ್ಷಕರು [ಡಿ.ಟಿ.ಸಿ] [ಪ್ರೌಢ ಶಾಲೆಗಳಿಗೆ ಮಾತ್ರ] |
| ಇ) ವೃತ್ತಿ ಶಿಕ್ಷಕರ ಸಮಾನಾಂತರ ಹುದ್ದೆ: | |
| 1 | ಶಿಕ್ಷಣ ಸಹಾಯಕರು [ವೃತ್ತಿ ಶಿಕ್ಷಣ] [ಆಯುಕ್ತರ ಕಛೇರಿ] |
| ಈ) ತರಬೇತಿ ಹೊಂದಿದ ಪದವೀಧರ ಶಿಕ್ಷಕರು (ಟಿ.ಜಿ.ಟಿ). | |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

Rajyashree.V.T
(ವಿ.ಟಿ. ರಾಜ್ಯಶ್ರೀ)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಪ್ರೌಢ ಶಿಕ್ಷಣ).

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ವಿಕಾಸ ಸೌಧ, ಬೆಂಗಳೂರು, ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಿ 500 ಪ್ರತಿಗಳನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, 6ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಸರಬರಾಜು ಮಾಡಲು.

ಪ್ರತಿ:

1. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ ರಾಜ್ಯ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
3. ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ
4. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
5. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ/ಕಲಬುರಗಿ
6. ನಿರ್ದೇಶಕರು (ಪ್ರೌಢ ಶಿಕ್ಷಣ), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
7. ನಿರ್ದೇಶಕರು (ಪ್ರಾಥಮಿಕ ಶಿಕ್ಷಣ), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
8. ಎಲ್ಲಾ ಉಪನಿರ್ದೇಶಕರುಗಳಿಗೆ/ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ (ಆಯುಕ್ತರು/ಅಪರ ಆಯುಕ್ತರ ಮುಖೇನ)
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.



Scanned by CamScanner